# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೬–ಸಿ<br>Part – VI-C | ಕಲಬುರಗಿ, ಶುಕ್ರವಾರ, ೩೦, ಜೂನ್, ೨೦೨೩ (ಆಷಾಢ, ೦೯, ಶಕವರ್ಷ, ೧೯೪೫)<br>KALABURAGI, FRIDAY, 30, JUNE, 2023 (ASHADA , 09, SHAKAVARSHA, 1945) | ನಂ. ೧೨<br>No. 12 |


ಕರ್ನಾಟಕ ಸರಕಾರ

## :: ಜಿಲ್ಲಾಧಿಕಾರಿಗಳು ಕೊಪ್ಪಳ ಇವರ ನಡವಳಿಗಳು::

ವಿಷಯ :- ಗ್ರಾಮ ಪಂಚಾಯತಿ ಸಾರ್ವತ್ರಿಕ ಚುನಾವಣೆಗಳು 2020 ರ ನಂತರ **ಕುಕನೂರು ತಾಲ್ಲೂಕಿನ** ಗ್ರಾಮ ಪಂಚಾಯತಿಗಳಿಗೆ **ಎರಡನೇ ಅವಧಿಗೆ** ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಮೀಸಲಾತಿಯನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ :-
1. ರಾಜ್ಯ ಚುನಾವಣಾ ಆಯೋಗದ ಆದೇಶ ಸಂ:ರಾಚುಆ:53:ಇಜಿಪಿ:2022 ದಿನಾಂಕ:25.05.2023
2. ರಾಜ್ಯ ಚುನಾವಣಾ ಆಯೋಗದ ಪತ್ರ ಸಂ:ರಾಚುಆ:53:ಇಜಿಪಿ:2022 ದಿನಾಂಕ:25.05.2023

--**--

**ಪ್ರಸ್ತಾವನೆ:**

ರಾಜ್ಯ ಚುನಾವಣಾ ಆಯೋಗವು ಉಲ್ಲೇಖಿತ (1)ರ ಆದೇಶದನ್ವಯ ಗ್ರಾಮ ಪಂಚಾಯತಿ ಸಾರ್ವತ್ರಿಕ ಚುನಾವಣೆಗಳು-2020ರ ನಂತರ **ಎರಡನೇ ಅವಧಿಗೆ** ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಹುದ್ದೆಗಳಿಗೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 44 ರ ಉಪಪ್ರಕರಣ (2)ರನ್ವಯ **ಕುಕನೂರು ತಾಲ್ಲೂಕಿಗೆ** ಕೆಳಕಾಣಿಸಿದಂತೆ ಅನುಸೂಚಿತ ಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗ-ಅ, ಹಿಂದುಳಿದ ವರ್ಗ-ಬ, ಸಾಮಾನ್ಯ ಸ್ಥಾನಗಳಿಗೆ ಮತ್ತು ಈ ಪ್ರವರ್ಗಗಳಲ್ಲಿ ಮಹಿಳೆಯರಿಗೆ ಮೀಸಲಿರಿಸಿದ ವರ್ಗವಾರು ಸಂಖ್ಯೆಯನ್ನು ನಿಗದಿಪಡಿಸಿರುತ್ತದೆ.

| ಕ್ರ.ಸಂ. | ವರ್ಗ | ಸಾಮಾನ್ಯ | ಮಹಿಳೆ | ಒಟ್ಟು |
|---|---|---|---|---|
| 1 | ಅನುಸೂಚಿತ ಜಾತಿ | 1 | 2 | 3 |
| 2 | ಅನುಸೂಚಿತ ಪಂಗಡ | 0 | 1 | 1 |
| 3 | ಹಿಂದುಳಿದ ವರ್ಗ-ಅ | 0 | 2 | 2 |
| 4 | ಹಿಂದುಳಿದ ವರ್ಗ-ಬ | 1 | 0 | 1 |
| 5 | ಸಾಮಾನ್ಯ | 5 | 3 | 8 |
| | **ಒಟ್ಟು :-** | **7** | **8** | **15** |

ಉಲ್ಲೇಖ (2)ರ ಪತ್ರದ ಮೂಲಕ ಎನ್.ಐ.ಸಿ ರವರು ಅಭಿವೃದ್ಧಿ ಪಡಿಸಿರುವ GPPVP Application ನ್ನು ಅಳವಡಿಸಿಕೊಂಡು ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಮೀಸಲಾತಿ ನಿಗದಿಪಡಿಸಲು ಅನುಮತಿ ನೀಡಿರುತ್ತದೆ. ಆದ್ದರಿಂದ ಕೊಪ್ಪಳ ಜಿಲ್ಲೆಯಲ್ಲಿ GPPVP Applicationನ್ನು ಬಳಸಿಕೊಂಡು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಹುದ್ದೆಗಳಿಗೆ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ.

ರಾಜ್ಯ ಚುನಾವಣಾ ಆಯೋಗದಿಂದ ನೀಡಲಾದ ನಿರ್ದೇಶನಗಳನ್ನು ಕೆಳಗೆ ತೋರಿಸಿದಂತೆ ಗಣನೆಗೆ ತೆಗೆದುಕೊಳ್ಳಲಾಗಿದೆ.

1. 1993, 2000ನೇ ಸಾಲಿನ ಚುನಾವಣೆಯ ನಂತರ ನಡೆದ ಎರಡು ಅವಧಿಗಳ ಮೀಸಲಾತಿ (2000 ಮತ್ತು 2002ನೇ ಸಾಲು) 2005ನೇ ಸಾಲಿನ ಚುನಾವಣೆಯ ನಂತರ ನಡೆದ ಎರಡು ಅವಧಿಗಳ ಮೀಸಲಾತಿ (2005 ಮತ್ತು 2007ನೇ ಸಾಲು), 2010ನೇ ಸಾಲಿನ ಚುನಾವಣೆಯ ನಂತರ ನಡೆದ ಎರಡು ಅವಧಿಗಳ ಮೀಸಲಾತಿ (2010 ಮತ್ತು 2012ನೇ ಸಾಲು) ಹಾಗೂ 2015ರ ಚುನಾವಣೆ ನಂತರ ನಡೆದ 5 ವರ್ಷದ ಒಂದು ಅವಧಿಗೆ ಮತ್ತು 2020ರ ಮೊದಲನೇ ಅವಧಿಗೆ ನಿಗದಿಪಡಿಸಲಾದ ಮೀಸಲಾತಿಯನ್ನು ಪರಿಗಣಿಸಿ ಒಟ್ಟಾರೆ 09 ಅವಧಿಗಳಲ್ಲಿ ನಿಗದಿಪಡಿಸಲಾದ ಮೀಸಲಾತಿಯನ್ನು ಪರಿಶೀಲಿಸಿ ಪ್ರಸ್ತುತ ಅವಧಿಗೆ ಮೀಸಲಾತಿಯನ್ನು ನಿಗದಿಪಡಿಸಬೇಕಾಗಿರುತ್ತದೆ. ನಿಗದಿಪಡಿಸುವ ಸ್ಥಾನಗಳಿಗಿಂತ ಕಡಿಮೆ ಪಂಚಾಯತಿಗಳು ಇದ್ದಲ್ಲಿ ಆಗ 1993, 2000ನೇ ಸಾಲಿನ (2000 ಮತ್ತು 2002), 2005ನೇ ಸಾಲಿನ (2005 ಮತ್ತು 2007), 2010ನೇ ಸಾಲಿನ (2010 ಮತ್ತು 2012), ಮತ್ತು 2015ನೇ ಸಾಲಿನ ವಿವಿಧ ಪ್ರವರ್ಗಗಳಿಗೆ ಮೀಸಲಿರಿಸಿದ ಪಂಚಾಯತಿಗಳಿಗೆ ಪುನರಾವರ್ತನೆಯಾಗಿ ತೆಗೆದುಕೊಳ್ಳಲಾಗಿದೆ.
2. ಯಾವುದೇ ಪ್ರವರ್ಗದಲ್ಲಿ ಮೀಸಲಾತಿ ನಿಗದಿಪಡಿಸುವಾಗ, ಅತ್ಯಂತ ಹೆಚ್ಚು ಸದಸ್ಯರು ಹೊಂದಿರುವ ಗ್ರಾಮ ಪಂಚಾಯತಿಗಳನ್ನು ನೇರವಾಗಿ ನಿಗದಿಪಡಿಸಲಾಗಿದೆ. ನಂತರ ಸಮಸಂಖ್ಯೆ ಸದಸ್ಯರನ್ನು ಹೊಂದಿದ ಗ್ರಾಮ ಪಂಚಾಯತಿಗಳಿಗೆ ಲಾಟರಿ ಎತ್ತುವ ಮೂಲಕ ಉಳಿದ ಸ್ಥಾನಗಳನ್ನು ನಿಗದಿಪಡಿಸಲಾಗಿದೆ.

3. ಮೊದಲನೆಯದಾಗಿ ತಾಲ್ಲೂಕಿಗೆ ನಿಗದಿಪಡಿಸಿರುವ ಸಂಖ್ಯೆಯಂತೆ ಪರಿಶಿಷ್ಟ ಜಾತಿ ಸ್ಥಾನಗಳ ಮೀಸಲಾತಿ ನಂತರ ಪರಿಶಿಷ್ಟ ಜಾತಿ ಮಹಿಳಾ ಸ್ಥಾನಗಳನ್ನು ಮೀಸಲಿರಿಸಲಾಗಿದೆ.
4. ಎರಡನೇಯದಾಗಿ ಪರಿಶಿಷ್ಟ ಪಂಗಡ ಸ್ಥಾನಗಳ ಮೀಸಲಾತಿ ನಂತರ ಪರಿಶಿಷ್ಟ ಪಂಗಡಗಳ ಮಹಿಳಾ ಸ್ಥಾನಗಳನ್ನು ಮೀಸಲಿರಿಸಲಾಗಿದೆ.
5. ನಂತರ ಹಿಂದುಳಿದ ವರ್ಗ-ಅ ಸ್ಥಾನಗಳ ಮೀಸಲಾತಿ ನಂತರ ಅದರಲ್ಲಿ ಮಹಿಳಾ ಸ್ಥಾನಗಳಿಗೆ ತದನಂತರ ಹಿಂದುಳಿದ ವರ್ಗ-ಬ ಸ್ಥಾನಗಳ ಮೀಸಲಾತಿ ನಂತರ ಅದರಲ್ಲಿ ಮಹಿಳಾ ಸ್ಥಾನಗಳಿಗೆ ಮೀಸಲಾತಿಯನ್ನು ನಿರ್ಧರಿಸಲಾಗಿದೆ.
6. ಅಂತಿಮವಾಗಿ ಪ.ಜಾತಿ, ಪ.ಪಂಗಡ, ಹಿಂದುಳಿದ ವರ್ಗ-ಅ, ಮತ್ತು ಹಿಂದುಳಿದ ವರ್ಗ-ಬ ಗಳಲ್ಲಿ ಆಯ್ಕೆಯಾಗಿ ಬಾಕಿ ಉಳಿದ ಪಂಚಾಯತಿಗಳನ್ನು ಸಾಮಾನ್ಯ ಎಂದು ಪರಿಗಣಿಸಿ ಇದರಲ್ಲಿ ಅತಿ ಹೆಚ್ಚು ಮಹಿಳಾ ಸದಸ್ಯ ಸ್ಥಾನಗಳನ್ನು ಹೊಂದಿರುವ ಪಂಚಾಯತಿಗಳನ್ನು ಸಾಮಾನ್ಯ ಮಹಿಳೆ ಎಂದು ಮೀಸಲಿರಿಸಲಾಗಿದೆ.
7. ಮೊದಲು ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷ ಸ್ಥಾನಗಳ ಮೀಸಲಾತಿ ಮುಕ್ತಾಯವಾದ ನಂತರ ಉಪಾಧ್ಯಕ್ಷ ಸ್ಥಾನಗಳ ಮೀಸಲಾತಿ ಪ್ರಕ್ರಿಯೆಯನ್ನು ಮಾಡಲಾಗಿದೆ.
8. ರಾಜ್ಯ ಚುನಾವಣಾ ಆಯೋಗದ ನಿರ್ದೇಶನದಂತೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ ಮೀಸಲಾತಿ ನಿಗದಿ ಮಾಡುವಾಗ ಕೆಳಗಿನ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಒಂದೇ ಗ್ರಾಮ ಪಂಚಾಯತಿಯಲ್ಲಿ ಈ ಕೆಳಕಂಡ ವರ್ಗಗಳನ್ನು ನಿಗದಿಪಡಿಸಿರುವುದಿಲ್ಲ.

| **ಅಧ್ಯಕ್ಷ** | **ಉಪಾಧ್ಯಕ್ಷ** |
|---|---|
| ಪರಿಶಿಷ್ಟ ಜಾತಿ | ಪರಿಶಿಷ್ಟ ಜಾತಿ |
| ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ |
| ಪರಿಶಿಷ್ಟ ಪಂಗಡ | ಪರಿಶಿಷ್ಟ ಪಂಗಡ |
| ಪರಿಶಿಷ್ಟ ಪಂಗಡ | ಪರಿಶಿಷ್ಟ ಜಾತಿ |
| ಹಿಂದುಳಿದ ವರ್ಗ-ಅ | ಹಿಂದುಳಿದ ವರ್ಗ-ಅ |
| ಹಿಂದುಳಿದ ವರ್ಗ-ಬ | ಹಿಂದುಳಿದ ವರ್ಗ-ಬ |
| ಮಹಿಳೆ | ಮಹಿಳೆ |

ಆದರೆ ಅನಿವಾರ್ಯ ಪ್ರಕರಣಗಳಲ್ಲಿ ಕೆಲವು ಗ್ರಾಮ ಪಂಚಾಯತಿಗಳ ಉಪಾಧ್ಯಕ್ಷ ಸ್ಥಾನಗಳನ್ನು ಮಹಿಳೆಗೆ ಮೀಸಲಿರಿಸುವಾಗ ಆ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನವು ಮಹಿಳೆಯಾಗಿರುತ್ತದೆ.

ಪ್ರಯುಕ್ತ, ರಾಜ್ಯ ಚುನಾವಣಾ ಆಯೋಗದ ಮಾರ್ಗಸೂಚಿಗಳನ್ನು ಅನುಸರಿಸಿ ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಸ್ಥಾನಗಳಿಗೆ ಮೀಸಲಾತಿಯನ್ನು, ಎಲ್ಲಾ ಗ್ರಾಮ ಪಂಚಾಯತಿ ಸದಸ್ಯರ ಸಮಕ್ಷಮದಲ್ಲಿ ದಿನಾಂಕ:20.06.2023 ರಂದು ನಿಗದಿಪಡಿಸಿ ಈ ಕೆಳಗಿನಂತೆ ಆದೇಶಿಸಿದೆ.

:: **ಆದೇಶ** ::

ನಂ:ಕಂದಾಯ:ಚುನಾವಣೆ:16:2022-23/ಕುಕನೂರು ದಿನಾಂಕ:20.06.2023

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 44 ರ ಉಪಪ್ರಕರಣ 2(ಎ)ರ ಅಧಿಕಾರದನ್ವಯ ಹಾಗೂ ರಾಜ್ಯ ಚುನಾವಣಾ ಆಯೋಗದ ಆದೇಶ ಸಂಖ್ಯೆ:ರಾಚುಆ:53:ಇಜಿಪಿ:2022 ದಿನಾಂಕ:25.05.2023ಕ್ಕೆ ಒಳಪಟ್ಟು ಕೊಪ್ಪಳ ಜಿಲ್ಲೆಯ ಜಿಲ್ಲಾಧಿಕಾರಿಯಾದ ನಾನು ಕೊಪ್ಪಳ ಜಿಲ್ಲೆಯ **ಕುಕನೂರು ತಾಲ್ಲೂಕಿನ** ಗ್ರಾಮ ಪಂಚಾಯತಿಗಳಿಗೆ 2020ರ **ಎರಡನೇ ಅವಧಿಗೆ** ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳನ್ನು ಈ ಕೆಳಕಂಡಂತೆ ಮೀಸಲಿರಿಸಿ ಆದೇಶಿಸುತ್ತೇನೆ.

| ಕ್ರ.ಸಂ. | ಗ್ರಾಮ ಪಂಚಾಯತಿಯ ಹೆಸರು | ಅಧ್ಯಕ್ಷ ಸ್ಥಾನ | ಉಪಾಧ್ಯಕ್ಷ ಸ್ಥಾನ |
|---|---|---|---|
| 1 | ಕುದರಿಮೋತಿ | ಹಿಂದುಳಿದ ವರ್ಗ- ಅ (ಮಹಿಳೆ) | ಪರಿಶಿಷ್ಟ ಜಾತಿ |
| 2 | ಹಿರೇಬೀಡನಾಳ | ಸಾಮಾನ್ಯ (ಮಹಿಳೆ) | ಪರಿಶಿಷ್ಟ ಜಾತಿ (ಮಹಿಳೆ) |
| 3 | ಮಂಗಳೂರು | ಹಿಂದುಳಿದ ವರ್ಗ- ಬ | ಪರಿಶಿಷ್ಟ ಪಂಗಡ (ಮಹಿಳೆ) |
| 4 | ಬಳಿಗೇರಿ | ಸಾಮಾನ್ಯ (ಮಹಿಳೆ) | ಹಿಂದುಳಿದ ವರ್ಗ- ಅ (ಮಹಿಳೆ) |
| 5 | ಶಿರೂರು | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 6 | ಬೆಣಕಲ್ | ಪರಿಶಿಷ್ಟ ಜಾತಿ | ಸಾಮಾನ್ಯ (ಮಹಿಳೆ) |
| 7 | ಭಾನಾಪುರ | ಸಾಮಾನ್ಯ | ಪರಿಶಿಷ್ಟ ಜಾತಿ (ಮಹಿಳೆ) |
| 8 | ತಳಕಲ್ | ಸಾಮಾನ್ಯ (ಮಹಿಳೆ) | ಹಿಂದುಳಿದ ವರ್ಗ- ಅ (ಮಹಿಳೆ) |
| 9 | ಇಟಗಿ | ಪರಿಶಿಷ್ಟ ಜಾತಿ (ಮಹಿಳೆ) | ಸಾಮಾನ್ಯ |
| 10 | ಬನ್ನಿಕೊಪ್ಪ | ಸಾಮಾನ್ಯ | ಸಾಮಾನ್ಯ (ಮಹಿಳೆ) |
| 11 | ಮಂಡಲಗೇರಿ | ಹಿಂದುಳಿದ ವರ್ಗ- ಅ (ಮಹಿಳೆ) | ಹಿಂದುಳಿದ ವರ್ಗ- ಬ |
| 12 | ಯರೇಹಂಚಿನಾಳ | ಪರಿಶಿಷ್ಟ ಪಂಗಡ (ಮಹಿಳೆ) | ಸಾಮಾನ್ಯ |
| 13 | ರಾಜೂರು | ಪರಿಶಿಷ್ಟ ಜಾತಿ (ಮಹಿಳೆ) | ಸಾಮಾನ್ಯ |
| 14 | ನೆಲಜೇರಿ | ಸಾಮಾನ್ಯ | ಸಾಮಾನ್ಯ |
| 15 | ಮಸಬಹಂಚಿನಾಳ | ಸಾಮಾನ್ಯ | ಸಾಮಾನ್ಯ |

**ಎಂ. ಸುಂದರೇಶಬಾಬು ಭಾ.ಆ.ಸೇ**
**ಜಿಲ್ಲಾಧಿಕಾರಿಗಳು**
**ಕೊಪ್ಪಳ**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಕಲಬುರಗಿ.

JAYASIMHA M N